








ಕ್ರೈಸ್ತ ಪಾದ್ರಿಗಳು ಧರಿಸುವಂತಹ ನಿಲುವಂಗಿ ಮತ್ತು ಕಪ್ಪು ಬಣ್ಣದ ತೊಗಲಿನ ಟೋಪಿಯನ್ನು ಸ್ವಾಮೀಜಿ ಧರಿಸಿದ್ದಾರೆ. ಇದು ಈಜಿಪ್ಟಿನ ರಾಜಧಾನಿಯಾದ ಕೈರೋದಲ್ಲಿ ತೆಗೆದದ್ದು ಎಂದು ಬಹಳ ಜನ ತಪ್ಪಾಗಿ ಭಾವಿಸಿದ್ದರು.

### ಛಾಯಾಚಿತ್ರ ೪೨

ಈ ಚಿತ್ರದಲ್ಲಿ ಸ್ವಾಮೀಜಿ ಕಾಶ್ಮೀರಿ ಟೋಪಿ, ಅಂಗಿ ಮತ್ತು ಕೋಟನ್ನು ಧರಿಸಿದ್ದಾರೆ.

ಒಮ್ಮೆ ವೆಸ್ಟ್‌ಮಿನಿಸ್ಟರ್ ಗೆಜೆಟ್ ಎಂಬ ಪತ್ರಿಕೆಯ ಪ್ರತಿನಿಧಿಯು ಸ್ವಾಮೀಜಿಯೊಡನೆ ಸಂದರ್ಶನವನ್ನು ಮಾಡಿದನು. ಅವರ ಬಗ್ಗೆ ಆತ ಹೀಗೆ ಬರೆಯುತ್ತಾನೆ: "ವಿವೇಕಾನಂದರದು ಶಾಂತ ಹಾಗೂ ಕರುಣಾಪೂರಿತ ಮುದ್ರೆಯಿಂದ ಕೂಡಿದ ವ್ಯಕ್ತಿತ್ವ. ಅವರ ಮುಖ ಒಂದು ಮುಗ್ಧಶಿಶುವಿನ ಮುಖದಂತೆ ಪ್ರಕಾಶಮಾನವಾಗಿ ಮಿಂಚುತ್ತಿರುತ್ತದೆ. ಅಲ್ಲಿ ಸರಳತೆ, ನೇರನಡತೆ ಮತ್ತು ಪ್ರಾಮಾಣಿಕತೆಗಳು ಎದ್ದು ಕಾಣುತ್ತಿರುತ್ತವೆ."

### ಛಾಯಾಚಿತ್ರ ೪೩

ಈ ಚಿತ್ರವು ಹಿಂದಿನ ಚಿತ್ರದ ಹಾಗೆಯೇ ಇದೆ.

೧೮೯೬ ರ ಅಕ್ಟೋಬರ್ ಕೊನೆಯ ವಾರದಲ್ಲಿ ಲಂಡನ್ನಿನ ಪ್ರಿನ್ಸಸ್ ಹಾಲ್‌ನಲ್ಲಿ ಸ್ವಾಮೀಜಿಯವರು 'ಆತ್ಮಬೋಧ'ದ ಬಗ್ಗೆ ಉಪನ್ಯಾಸ ಮಾಡಿದರು. ಅದು ಅತ್ಯಂತ ಯಶಸ್ವಿಯಾಯಿತು. ಎಲ್ಲ ಬಗೆಯ ವೃತ್ತಿಗಳಿಗೆ ಸೇರಿದ ಜನರು ಮತ್ತು ಅತ್ಯಂತ ಶ್ರೇಷ್ಠ ಚಿಂತನಶೀಲ ವ್ಯಕ್ತಿಗಳಿಂದ ಕೂಡಿದ ಬೃಹತ್ ಸಭೆಯೊಂದು ಅಲ್ಲಿ ನೆರೆದಿತ್ತು. ಸ್ವಾಮೀಜಿಯ ಉಪನ್ಯಾಸವನ್ನು ಕೇಳಿದ ಒಬ್ಬ ವ್ಯಕ್ತಿ ಹೀಗೆ ಬರೆದರು: "ಅವರು ತಮ್ಮ ಭವ್ಯವಾದ ಹಾಗೂ ಪ್ರಬಲವಾದ ವಾಕ್ಸಾಮರ್ಥ್ಯದಿಂದ ಸಭಿಕರಲ್ಲಿ ಒಂದು ಸಂಚಲನವನ್ನೇ ಉಂಟುಮಾಡಿದರು."

### ಛಾಯಾಚಿತ್ರ ೪೪

ಈ ಚಿತ್ರ ಕೂಡ ಹಿಂದಿನ ಚಿತ್ರದ ಪ್ರತಿರೂಪ.

ಪ್ರಿನ್ಸಸ್ ಹಾಲ್‌ನಲ್ಲಿ ಸ್ವಾಮೀಜಿ ಮಾಡಿದ ಭಾಷಣವನ್ನು ಕೇಳಿದ 'ಸ್ಟ್ಯಾಂಡರ್ಡ್' ಎಂಬ ಪತ್ರಿಕೆಯ ವರದಿಗಾರ ಹೀಗೆ ಬರೆಯುತ್ತಾನೆ:

"ಮೊದಲಿಗೆ ರಾಜಾರಾಮ ಮೋಹನ್‌ರಾಯ್, ಅನಂತರ ಕೇಶವಚಂದ್ರ ಸೇನ್ – ಇವರಿಬ್ಬರನ್ನು ಬಿಟ್ಟರೆ ಪ್ರಿನ್ಸಸ್ ಹಾಲ್‌ನಲ್ಲಿ ಸ್ವಾಮಿ ವಿವೇಕಾನಂದರಿಗಿಂತ ಹೆಚ್ಚು ಸ್ವಾರಸ್ಯಕರವಾಗಿ ಮಾತನಾಡಿದ ಇನ್ನೊಬ್ಬ ಭಾರತೀಯನು ಈ ಇಂಗ್ಲೆಂಡಿನ ವೇದಿಕೆಯ ಮೇಲೆ ಕಾಣಿಸಿಕೊಂಡಿಲ್ಲ. ಅವರ ಉಪನ್ಯಾಸವು ಪೂರ್ವಸಿದ್ಧತೆಯಿಲ್ಲದೆ ಸ್ವಯಂಸ್ಫೂರ್ತಿಯಿಂದ ಮಾಡಿದ್ದು ಎಂಬುದು ಸ್ಪಷ್ಟವಾಗಿತ್ತು. ಅಲ್ಲದೆ ಅವರ ಭಾಷಣವು ಯಾವ ಬಗೆಯ ಸಂಕೋಚವೂ ಇಲ್ಲದ, ಮಧುರವಾದ ಕಂಠಶ್ರೀಯಿಂದ ಕೂಡಿತ್ತು. ಅವರ ಮುಖಲಕ್ಷಣವು ಚಿರಪರಿಚಿತವಾದ ಭಗವಾನ್ ಬುದ್ಧನ ಮುಖವನ್ನೇ ಹೋಲುತ್ತದೆ."



## ಸ್ವಾಮಿ ವಿವೇಕಾನಂದರು ನಿರೂಪಿಸಿದ

# ನೀತಿಕಥೆಗಳು



ಡಾ. ಕೆ. ಅನಂತರಾಮು

## ಕೂಪಮಂಡೂಕ

ಈ ಸುಂದರವಾದ ಜಗತ್ತನ್ನು ಬಹಳ ಹಿಂದಿನಿಂದಲೂ ಸ್ವಮತಾಭಿಮಾನ ಮತ್ತು ಪರಮತದ್ವೇಷಗಳು ಆವರಿಸಿಬಿಟ್ಟಿವೆ. ಅದರ ಫಲವಾಗಿ ಕ್ರೂರವಾದ ಧಾರ್ಮಿಕ ದುರಭಿಮಾನ ಹುಟ್ಟಿಕೊಂಡಿದೆ. ಆ ದುರಭಿಮಾನವಾದರೋ ಕಾಲದಿಂದ ಕಾಲಕ್ಕೆ ಜಗತ್ತನ್ನೆಲ್ಲ ಹಿಂಸೆಯಿಂದ ತುಂಬಿಸಿಬಿಟ್ಟಿದೆ; ನರರಕ್ತದಿಂದ ತೋಯಿಸಿಬಿಟ್ಟಿದೆ; ಹಲವು ದೇಶಗಳನ್ನು ನಿರಾಸೆಯ ಕೂಪಕ್ಕೆ ತಳ್ಳಿಬಿಟ್ಟಿದೆ; ಅಷ್ಟೇ ಏಕೆ, ಕೆಲವು ಸಂಸ್ಕೃತಿಗಳನ್ನೇ ನಾಶಮಾಡಿಬಿಟ್ಟಿದೆ. ಈ ಬಗೆಯ ಧರ್ಮಾಂಧತೆಯಿಂದ ಈ ಜಗತ್ತನ್ನು ಮುಕ್ತವಾಗಿರಿಸಿದ್ದರೆ ಮಾನವಜನಾಂಗವು ಇಂದಿಗಿಂತಲೂ ಅದೆಷ್ಟು ಹೆಚ್ಚಿನ ಪ್ರಗತಿಯನ್ನು ಸಾಧಿಸಬಹುದಾಗಿತ್ತೋ! ಈಗಲೂ ಕಾಲಮೀರಿಲ್ಲ, ಜಗತ್ತಿನ ಮನುಜರು ತಮ್ಮ ನಡುವಣ ಭಿನ್ನಾಭಿಪ್ರಾಯಗಳನ್ನು ಕಿರಿದುಗೊಳಿಸಿಕೊಂಡರೆ, ಒಬ್ಬರನ್ನೊಬ್ಬರು ದೂರುವುದನ್ನು ನಿಲ್ಲಿಸಿದರೆ, ಶ್ರೇಯಸ್ಸಿನ ದ್ವಾರಗಳು ತಾವಾಗಿಯೇ ತೆರೆದುಕೊಳ್ಳುತ್ತವೆ.

ಒಂದು ಬಾವಿಯಲ್ಲಿ ಅನೇಕ ಕಪ್ಪೆಗಳು ವಾಸವಾಗಿದ್ದುವು. ಅವೆಲ್ಲವೂ ಅಲ್ಲಿನ ಕ್ರಿಮಿಕೀಟಗಳನ್ನು ಆಹಾರವಾಗಿಸಿಕೊಂಡು ಬದುಕು ಸಾಗಿಸುತ್ತಿದ್ದುವು. ಆ ಪೈಕಿ ಅಲ್ಲಿಯೇ ಹುಟ್ಟಿಬೆಳೆದ ದೊಡ್ಡದಾದ ಕಪ್ಪೆಯೊಂದು ಅವುಗಳಿಗೆ ನಾಯಕನಾಗಿತ್ತು. ತಮ್ಮ ಬಾವಿಯಿಂದ ಹೊರಗೆ ಬೇರೊಂದು ಜಗತ್ತಿದೆ, ಬೇರೆಬೇರೆ ಜಲಾಶಯಗಳಿವೆ ಎಂಬ ಪ್ರಜ್ಞೆ ಆ ನಾಯಕಕಪ್ಪೆಗಾಗಲಿ, ಮಿಕ್ಕ ಕಪ್ಪೆಗಳಿಗಾಗಲಿ ಇರಲಿಲ್ಲ. ಹೀಗಿರುವಾಗ ಒಂದು ದಿನ ಸಮುದ್ರದಲ್ಲಿ ವಾಸಿಸುತ್ತಿದ್ದ ಕಪ್ಪೆಯೊಂದು, ಹೇಗೋ ಆ ಬಾವಿಯೊಳಕ್ಕೆ ಬಂದುಬಿದ್ದಿತು. ತನ್ನ ಜಾತಿಗೇ ಸೇರಿದಂತೆ ಕಂಡುದರಿಂದ ಬಾವಿಯ ನಾಯಕಮಂಡೂಕವು ಸಮುದ್ರ ಕಪ್ಪೆಯನ್ನು ಕುರಿತು, “ನೀನು ಎಲ್ಲಿಂದ ಬಂದೆ?” ಎಂದು ಕೇಳಿತು. ಸಾಗರಕಪ್ಪೆಯು, “ನಾನು ಸಮುದ್ರವೆಂದು ಕರೆಯುವ ವಿಶಾಲವಾದೊಂದು ಜಲಾಶಯದಿಂದ ಇಲ್ಲಿಗೆ ಬಂದೆ” ಎಂದು ಉತ್ತರಿಸಿತು. ಆಗ ಬಾವಿಕಪ್ಪೆಗೆ “ನಾನು ವಾಸಿಸುತ್ತಿರುವ ಈ ಬಾವಿಗಿಂತ ಬೇರೆಯಾಗಿ ವಿಸ್ತಾರವಾದೊಂದು ಜಲಾಶಯ ಇರಲು ಸಾಧ್ಯವುಂಟೇ” ಎಂಬ ಭಾವನೆ ತಲೆಯನ್ನು ಹೊಕ್ಕಿತು. ಒಡನೆಯೆ ಆ ಬಾವಿಕಪ್ಪೆಯು, “ವಿಶಾಲವಾದ ಸಮುದ್ರವೆಂಬ ಜಲಾಶಯದಿಂದ ಬಂದಿದ್ದೇನೆ ಎಂದು ನೀನು ಹೇಳುತ್ತಿದ್ದೀಯಲ್ಲಾ, ಆ ಜಲಾಶಯ ಇಷ್ಟು ದೊಡ್ಡದೋ” ಎನ್ನುತ್ತ ತನ್ನ ಬಾವಿಯಲ್ಲೇ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸ್ವಲ್ಪದೂರ ನೆಗೆದು ತೋರಿಸಿತು. ಅದಕ್ಕೆ ಸಮುದ್ರಕಪ್ಪೆಯು, “ಅಯ್ಯಾ ಸ್ನೇಹಿತನೇ, ಸಮುದ್ರವೆಂದರೆ ನೀನು ಏನೆಂದು ತಿಳಿದೆ? ಅದು ಅತ್ಯಂತ ವಿಸ್ತಾರವಾದುದು. ಅದನ್ನು ನಿನ್ನ ಈ ಬಾವಿಯೊಂದಿಗೆ ಹೋಲಿಸಲೇಬೇಡ” ಎಂದಿತು.

ಅಷ್ಟಾದರೂ ಬಾವಿಕಪ್ಪೆ ಸುಮ್ಮನಾಗಲಿಲ್ಲ. ಮತ್ತೊಂದು ಸಲ ಈ ಮೊದಲಿಗಿಂತಲೂ ಇನ್ನೂ ಸ್ವಲ್ಪ ಹೆಚ್ಚುದೂರಕ್ಕೆ ನೆಗೆದು “ಹೋಗಲಿ, ಇಷ್ಟು ದೊಡ್ಡದೋ ಹಾಗಾದರೆ ನೀನು ಹೇಳುವ ಸಮುದ್ರ” ಎಂದು ಬಿಂಕದಿಂದ ಕೇಳಿತು. ಆಗ ಸಾಗರಕಪ್ಪೆಯು “ನಿನಗೆ ಎಷ್ಟು ಹೇಳಿದರೂ ಅರ್ಥವಾಗುವುದಿಲ್ಲ. ಸಮುದ್ರವನ್ನು ಈ ನಿನ್ನ ಬಾವಿಯೊಂದಿಗೆ ಹೋಲಿಸುವ ಹುಚ್ಚುತನವನ್ನು ಬಿಟ್ಟುಬಿಡು” ಎಂದು ನಸುಗೋಪದಿಂದ ಝುಂಕಿಸಿತು. ಆದರೆ ಬಾವಿಕಪ್ಪೆಗೆ ಅದೆಲ್ಲ ಮನಸ್ಸಿಗೆ ಮುಟ್ಟಲಿಲ್ಲ. “ನೀನು ಏನಾದರೂ ಹೇಳಿಕೋ, ನನ್ನ ಈ ಬಾವಿಗಿಂತ ದೊಡ್ಡ ಜಲಾಶಯ ಬೇರಾವುದೂ ಇರುವುದು ಸಾಧ್ಯವೇ ಇಲ್ಲ. ನೀನು ಹೇಳುತ್ತಿರುವುದೆಲ್ಲ ಸುಳ್ಳು ಮಾತು” ಎಂದು ಹೀಯಾಳಿಸಿತು. ಆಮೇಲೆ ತನ್ನ ಜೊತೆಗಾರ ಕಪ್ಪೆಗಳನ್ನು ಕುರಿತು, “ಈ ಸುಳ್ಳುಗಾರನನ್ನು ನಮ್ಮ ಬಾವಿಯಿಂದ ಹೊರಕ್ಕೆ ತಳ್ಳಿ” ಎಂದು ಕೋಪದಿಂದ ಹೇಳಿತು. ಆಗ ಸಮುದ್ರಕಪ್ಪೆಯು, “ನಾನು ನಿಮ್ಮ ಕೈಯಿಂದ ತಳ್ಳಿಸಿಕೊಂಡು ಹೋಗಲು ಬಂದವನಲ್ಲ. ನಿಮ್ಮಂತಹ ಕೂಪಮಂಡೂಕಗಳ ಸಹವಾಸವೇ ನನಗೆ ಬೇಡ” ಎನ್ನುತ್ತ ತಾನೇ ಅಲ್ಲಿಂದ ಹೊರಟುಹೋಯಿತು.

“ನಾವು ಯಾವಾಗಲೂ ಆ ಬಾವಿಕಪ್ಪೆಯಂತೆಯೇ ಇರುತ್ತೇವೆ. ಹಿಂದುವೆನಿಸಿದವನು ತನ್ನ ಸಣ್ಣಬಾವಿಯಲ್ಲಿ ಕುಳಿತು ಜಗತ್ತೆಂದರೆ ಈ ನನ್ನ ಬಾವಿಯೊಂದೇ ಎಂದು ಆಲೋಚಿಸುತ್ತಿರುತ್ತಾನೆ. ಕ್ರೈಸ್ತನೆನಿಸಿದವನು ತನ್ನ ಸಣ್ಣಕೂಪದಲ್ಲಿ ಕುಳಿತು ಪ್ರಪಂಚವೆಲ್ಲಾ ಇಷ್ಟೇ ಎಂದು ತಿಳಿಯುತ್ತಾನೆ. ಮಿಕ್ಕ ಧರ್ಮದವರ ಹಣೇಬರಹವೂ ಇಷ್ಟೆ. ನಾವು ಅಪ್ಪಿಕೊಂಡಿರುವ ಈ ಸಣ್ಣ ಪ್ರಪಂಚದ ಮೇರೆಯನ್ನು ಒಡೆದುಹಾಕಲು ನಾವೆಲ್ಲರೂ ಪ್ರಯತ್ನಿಸಬೇಕು. ಹಾಗೆ ಪ್ರಯತ್ನಿಸುತ್ತ ಮುಂದೆ ಸಾಗುವವರಿಗೆ ಪ್ರಪಂಚಕ್ಕೆಲ್ಲ ಒಬ್ಬನೇ ಆಗಿರುವ ಪರಮಾತ್ಮನು ಖಂಡಿತ ಸಹಾಯಮಾಡುತ್ತಾನೆ” ಎಂದು ವಿವೇಕಾನಂದರು ಘೋಷಿಸಿದ್ದಾರೆ. ಇದಲ್ಲದೆ, ಚಿಕಾಗೋದಲ್ಲಿ ನಡೆದ ಸರ್ವಧರ್ಮಸಮ್ಮೇಳನದ ಶುಭಾರಂಭವನ್ನು

ಸೂಚಿಸಲು ಮೊಳಗಿದ ಘಂಟಾನಾದವು ಒಂದೇ ಗುರಿಯತ್ತ ಸಾಗುತ್ತಿರುವ ಪಥಿಕರ ನಡುವೆ ಉಂಟಾಗಿರುವ ಮನಸ್ತಾಪದ ಭೂತಗಳ ಅಂತ್ಯಕ್ರಿಯೆಯನ್ನು ಜಗತ್ತಿಗೆ ಸೂಚಿಸುವ ಧ್ವನಿಯಾಗಿದೆ ಯೆಂದು ಚಿಂತನೆ ಮಾಡಬೇಕು ಎಂಬುದಾಗಿಯೂ ಅವರು ಆದೇಶಿಸಿದ್ದಾರೆ. ವಿವೇಕಾನಂದರ ಈ ಚಿಂತನೆಯಂತೂ ಪರಮಾದ್ಭುತವಾಗಿದೆ. ಸಂಸ್ಕೃತ ಭಾಷೆಯಲ್ಲಿ 'ಕೂಪಮಂಡೂಕ' ಎಂಬ ನುಡಿಗಟ್ಟೊಂದಿದೆ. 'ಬಾವಿಯೊಳಗಿನ ಕಪ್ಪೆ' ಎಂಬುದು ಅದಕ್ಕಿರುವ ಅರ್ಥ. 'ತನ್ನ ಸುತ್ತ ಇರುವಷ್ಟೇ ಇಡೀ ಪ್ರಪಂಚ' ಎಂದು ತಿಳಿದ ವಿಚಾರಶೂನ್ಯನನ್ನು 'ಕೂಪಮಂಡೂಕ' ಎಂದು ಕರೆಯಲಾಗುತ್ತದೆ.

ಬಾವಿಯ ಕಪ್ಪೆಯ ದೃಷ್ಟಾಂತವನ್ನು ನಾವು 'ಶ್ರೀ ರಾಮಕೃಷ್ಣ ವಚನವೇದ'ದಿಂದಲೂ ಆಯ್ದು ಆಸ್ವಾದಿಸಬಹುದಾಗಿದೆ. ಭಗವಂತನ ಭಾವನೆಯಿಂದ ಉದ್ದೀಪನಗೊಳ್ಳುವ ಆನಂದವನ್ನು 'ಭಗವದಾನಂದ' ಎನ್ನಬಹುದು. ಕಾಮಕಾಂಚನಗಳ ಸಂಸರ್ಗದಿಂದಷ್ಟೇ ಆನಂದಿತರಾಗುವವರಿಗೆ ಭಗವದಾನಂದವೆಂಬುದೊಂದಿದೆ, ಅದು ಆಸ್ವಾದನೆಗೆ ಯೋಗ್ಯವಾಗಿದೆ, ಆ ಆನಂದವನ್ನು ಸವಿಯಲು ಸತ್ಪುರುಷರನ್ನು ಆಶ್ರಯಿಸಬೇಕು ಎಂಬ ಬುದ್ಧಿಯೇ ಹುಟ್ಟುವುದಿಲ್ಲ. ಅವರು ಅಂತಹ ಆನಂದವನ್ನು ನಂಬುವುದೂ ಇಲ್ಲ. ಪರಮಹಂಸರು ಅಂತಹ ಮನುಜರನ್ನು ಕೂಪಮಂಡೂಕಕ್ಕೆ ಹೋಲಿಸಿದ್ದಾರೆ. "ಇವರು ಯಾವ ರೀತಿಯ ಮನುಷ್ಯರು ಎಂಬುದು ಗೊತ್ತೆ? ಇವರನ್ನು ಎಂದೂ ನೆಲವನ್ನೇ ಕಾಣದ ಬಾವಿಕಪ್ಪೆಗೆ ಹೋಲಿಸಬಹುದು. ಬಾವಿಕಪ್ಪೆಗೆ ತನ್ನ ಬಾವಿ ಇರುವುದು ಮಾತ್ರವೇ ಗೊತ್ತಿದೆ. ಅದಕ್ಕಾಗಿ ಅದು ನೆಲ ಎಂಬುದೊಂದು ಇದೆ ಎಂಬುದನ್ನು ನಂಬುವುದೇ ಇಲ್ಲ. ಇದೇ ರೀತಿಯಾಗಿ ಇವರಿಗೆ ಭಗವದಾನಂದವನ್ನು ಸವಿಯುವ ಸೌಲಭ್ಯವೇ ದೊರೆಯದಿರುವುದರಿಂದ 'ಸಂಸಾರ' ಅಂತ ತಲೆಚಚ್ಚಿಕೊಳ್ಳುತ್ತಿದ್ದಾರೆ" ಎಂದು ಪರಮಹಂಸರು ನಿರೂಪಿಸಿದ್ದಾರೆ.

## ಮಾನವ ಜನ್ಮದ ದೊಡ್ಡಸ್ತಿಕೆ

ವಿಶ್ವದ ಜೀವಕೋಟಿಗಳಲ್ಲಿ ಮಾನವನೇ ಅತ್ಯಂತ ಶ್ರೇಷ್ಠನೆನಿಸಿದ್ದಾನೆ. ಎಲ್ಲ ಪ್ರಾಣಿವರ್ಗಕ್ಕಿಂತಲೂ ಮನುಷ್ಯನೇ ಮಿಗಿಲಾದವನಾಗಿದ್ದು ಅವನು ದೇವತೆಗಳನ್ನೂ ಮೀರಿಸಿದ್ದಾನೆ. ದೇವಜನ್ಮದಲ್ಲಿ ಸಾಧನೆಮಾಡಿ, ಹುಟ್ಟುಸಾವುಗಳ ಬಂಧನವಿಲ್ಲದ ಮೋಕ್ಷವನ್ನು ಪಡೆಯುವುದು ಸಾಧ್ಯವಿಲ್ಲ. ಅದು ಕೇವಲ ಭೋಗಜನ್ಮ. ದೇವತೆಗಳು ತಮ್ಮ ಪುಣ್ಯಫಲವು ತೀರಿದ ಬಳಿಕ ಈ ಭೂಮಿಗೇ ಬಂದು ಜನ್ಮತಾಳಬೇಕು. ಹೀಗಾಗಿ ಮನುಷ್ಯಜನ್ಮವು ಪರಿಪೂರ್ಣತೆಯ ಸಂಕೇತವಾಗಿದೆ. ಮಾನವ ದೇಹಧಾರಿಗಳಾಗಿಯೇ ಸಾಧನೆ ಮಾಡಿ ಮೋಕ್ಷವನ್ನು ಸಂಪಾದಿಸಿಕೊಳ್ಳಬೇಕು.

ಸೃಷ್ಟಿಕಾಲದಲ್ಲಿ ಪರಮಾತ್ಮನು ಕ್ರಮವಾಗಿ ಪ್ರಾಣಿಪಕ್ಷಿಗಳನ್ನೂ ದೇವತೆಗಳನ್ನೂ ಸೃಷ್ಟಿಸಿ, ಕೊನೆಯಲ್ಲಿ ಮನುಷ್ಯರನ್ನು ಸೃಷ್ಟಿಸಿದನೆಂದು ಯಹೂದ್ಯರೂ ಕ್ರೈಸ್ತರೂ ಮಹಮ್ಮದೀಯರೂ ನಂಬುತ್ತಾರೆ. ಹಾಗೆ ಸೃಷ್ಟಿಸಿದ ಬಳಿಕ ದೇವತೆಗಳನ್ನು ಕೂಗಿ ಕರೆದು ಪರಮಾತ್ಮನು, "ಇಲ್ಲಿ ನೋಡಿ, ನಾನು ಮನುಷ್ಯರೆಂಬ ಪೂರ್ಣಪುರುಷರನ್ನು ಸೃಷ್ಟಿಸಿದ್ದೇನೆ. ನೀವೆಲ್ಲರೂ ಅವನಿಗೆ ನಮಸ್ಕಾರಮಾಡಿ" ಎಂದು ಆಜ್ಞಾಪಿಸಿದನು. ಆ ಹೊತ್ತಿನಲ್ಲಿ ಇಬ್ಲಿಸ್ ಎಂಬ ದೇವತೆಯ ಹೊರತಾಗಿ ಎಲ್ಲರೂ ದೇವರ ಆಜ್ಞೆಯನ್ನು ಪರಿಪಾಲಿಸಿದರು.

ಆಗ ದೇವರು ಇಬ್ಲಿಸನನ್ನು ಕುರಿತು, "ನೀನೇಕೆ ನಮಸ್ಕರಿಸುತ್ತಿಲ್ಲ?" ಎಂದು ಕೇಳಿದನು. ಅದಕ್ಕೆ ಇಬ್ಲಿಸನು "ನಾನು ದೇವತೆ, ಅವರು ಮನುಷ್ಯರು, ಅವರಿಗಿಂತ ನಾನೇ ಮೇಲಲ್ಲವೇ, ನಾನೇಕೆ ಅವರಿಗೆ ಅಡ್ಡಬೀಳಬೇಕು" ಎಂದು ದೇವರಿಗೇ ಎದುರಾಡಿದನು. ಅದರಿಂದ ಕೋಪಗೊಂಡ ದೇವರು, "ನೀನು ಸೈತಾನನಾಗು" ಎಂದು ಶಪಿಸಿಬಿಟ್ಟನು. ಹಾಗೆ ಸೈತಾನನಾದ ಇಬ್ಲಿಸನು "ತಾಳು, ನಿನ್ನ ನರಮನುಷ್ಯರಿಗೆ ತಕ್ಕದ್ದು ಮಾಡುತ್ತೇನೆ" ಎಂದು ಕುದಿಯುತ್ತ ಅವರನ್ನೆಲ್ಲ ಅನಾದಿಕಾಲದಿಂದಲೂ ಅಡ್ಡದಾರಿ ಹಿಡಿಸುತ್ತಿದ್ದಾನೆ.

"ನಾವು ಪಡೆಯಬಹುದಾದ ಜನ್ಮಗಳಲ್ಲಿ ಮಾನವಜನ್ಮವೇ ಅತ್ಯಂತ ಪವಿತ್ರವೂ ಶ್ರೇಷ್ಠವೂ ಆದುದು ಎಂಬ ಘನತರವಾದ ಸತ್ಯವೊಂದು ಈ ವೃತ್ತಾಂತದ ಹಿನ್ನೆಲೆಯಲ್ಲಿದೆಯೆಂಬುದನ್ನು ಪರಿಭಾವಿಸಬೇಕು" ಎಂದು ವಿವೇಕಾನಂದರು ಎಚ್ಚರಿಸಿದ್ದಾರೆ.

ದೇವತೆಗಳಿಗಿಂತ ಮನುಷ್ಯರೇ ಅಧಿಕ ಭಾಗ್ಯಸಂಪನ್ನರು ಎಂಬ ಸಂಗತಿಯು 'ವಿಷ್ಣುಪುರಾಣ'ದಲ್ಲಿ ಕೂಡ ನಿರೂಪಿತವಾಗಿರುವುದನ್ನು ಈ ಸಂದರ್ಭದಲ್ಲಿ ಸ್ಮರಿಸಿಕೊಳ್ಳಬಹುದು. ಬ್ರಹ್ಮದೇವನು ಬಹುಬಗೆಯ ಜೀವರಾಶಿಗಳನ್ನೂ ದೇವತೆಗಳನ್ನೂ ಸೃಷ್ಟಿಸಿದ ಬಳಿಕ ಮನುಷ್ಯರನ್ನು ಸೃಷ್ಟಿಸಿದನು. ದೇವತೆಗಳು ಕಾರ್ಯಸಾಧಕರಲ್ಲ ಎಂದು ಅವನಿಗೆ ಮನವರಿಕೆಯಾದಾಗ ಮನುಷ್ಯಕುಲವನ್ನು ಸೃಷ್ಟಿಸಿದನು. ಮನುಷ್ಯರೇ ಕಾರ್ಯಸಾಧಕರು, ಅತ್ಯಂತ ಕ್ರಿಯಾಶೀಲರು, ಬಾಹ್ಯ ಮತ್ತು ಆಂತರಿಕ ಜ್ಞಾನವುಳ್ಳವರು ಎಂದು ಬ್ರಹ್ಮನು ಹರ್ಷಪಟ್ಟನು. ದೇವತೆಗಳಾದರೂ ಅಷ್ಟೇ, ಮಾನವಕುಲದ ವಿಷಯದಲ್ಲಿ ಅಪಾರವಾದ ಗೌರವವುಳ್ಳವರಾಗಿದ್ದಾರೆಂದು 'ವಿಷ್ಣುಪುರಾಣ'ದಲ್ಲಿ ಹೇಳಿದೆ:

ಗಾಯಂತಿ ದೇವಾಃ ಕಿಲಗೀತಕಾನಿ
ಧನ್ಯಾಸ್ತು ತೇ ಭಾರತ ಭೂಮಿಭಾಗೇ ।
ಸ್ವರ್ಗಾಪವರ್ಗಾಸ್ಪದಮಾರ್ಗಭೂತೇ ।
ಭವಂತಿ ಭೂಯಃ ಪುರುಷಾಃ ಸುರತ್ವಾತ್ ॥

"ಆಹಾ, ಭರತಖಂಡದಲ್ಲಿ ಹುಟ್ಟುವಂತಹ ಮಾನವರೇ ಧನ್ಯರು. ನಮಗಿಂತ ಅವರ ಜನ್ಮವೇ ಉತ್ತಮವಾದುದು. ಸ್ವರ್ಗವನ್ನಾಗಲಿ, ಮೋಕ್ಷವನ್ನಾಗಲಿ ಪಡೆದುಕೊಳ್ಳಲು ಅವಕಾಶವಿರುವ ಮಾರ್ಗವನ್ನು ತೋರಿಸುವಂತಹ ಕರ್ಮಭೂಮಿಯಲ್ಲಿ ಅವರೆಲ್ಲರೂ ಇದ್ದಾರೆ" ಎಂದು ತಮ್ಮತಮ್ಮಲ್ಲೇ ದೇವತೆಗಳು ಸದಾಕಾಲ ಹಾಡಿಕೊಳ್ಳುತ್ತಾರೆ.